# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 136 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 22-09-2020 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ಬರುವ ವಾರ್ಡ್‌ಗಳಲ್ಲಿ ತ್ಯಾಜ್ಯ ವಿಲೇವಾರಿ ಸಮರ್ಪಕವಾಗಿ ನಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?</td><td>
<ul>
<li>ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ಪ್ರತಿ ನಿತ್ಯ 60 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಸುಮಾರು 58 ಟನ್ ತ್ಯಾಜ್ಯವನ್ನು ಸಂಗ್ರಹಿಸಿ ಕಾಳೇನಹಳ್ಳಿ ಸಂಸ್ಕರಣಾ ಘಟಕದಲ್ಲಿ ವಿಲೇವಾರಿ ಮಾಡಲಾಗುತ್ತಿದೆ. 2 ಟನ್ ತ್ಯಾಜ್ಯವನ್ನು ಮೇಲುಕೋಟೆ ರಸ್ತೆಯ ಬಳಿಯಿರುವ ವಿಕೇಂದ್ರಿಕೃತ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಹಸಿ ತ್ಯಾಜ್ಯವನ್ನು ಗೊಬ್ಬರವಾಗಿ ಪರಿವರ್ತಿಸಿ ಪಾರ್ಕ್‌ಗಳಲ್ಲಿ ಬಳಸಲಾಗುತ್ತಿದೆ.</li>
<li>ಪ್ರಸ್ತುತ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ತ್ಯಾಜ್ಯ ಸಂಸ್ಕರಣಾ ಸಾಮರ್ಥ್ಯ ಕಡಿಮೆಯಿದ್ದು, ವಾಹನ ಯಂತ್ರೋಪಕರಣಗಳು ಹಾಗು ಮಾನವಸಂಪನ್ಮೂಲದ ಕೊರತೆಯಿರುತ್ತದೆ.</li>
<li>ಆದ್ದರಿಂದ ತ್ಯಾಜ್ಯ ಸಂಸ್ಕರಣೆಯನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಅಗತ್ಯವಿರುವ ಸಿವಿಲ್ ಕಾಮಗಾರಿ ಹಾಗು ವಾಹನ ಯಂತ್ರೋಪಕರಣಗಳನ್ನು ಪ್ರಸ್ತಾಪಿಸಿ ಸ್ವಚ್ಛ ಭಾರತ ಮಿಷನ್ ಅಡಿ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಿ ಉನ್ನತಾಧಿಕಾರಯುಕ್ತ ಸಮಿತಿಯ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.</li>
<li>ಅದರ ರೀತ್ಯಾ 17 ಸಿವಿಲ್ ಕಾಮಗಾರಿ ಹಾಗು 5 ವಾಹನ ಯಂತ್ರೋಪಕರಣಗಳ ಖರೀದಿ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.</li>
</ul>
</td></tr>
<tr><td>ಆ</td><td>ತ್ಯಾಜ್ಯ ವಿಲೇವಾರಿ ನಿರ್ವಹಣೆಗಾಗಿ ಅನುಮೋದನೆಗೊಂಡ ಹುದ್ದೆಗಳೆಷ್ಟು; ಇದರಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು; (ವಿವರ ನೀಡುವುದು)</td><td>
<ul>
<li>ಘನತ್ಯಾಜ್ಯ ನಿರ್ವಹಣೆಗೆ ಅಗತ್ಯವಿರುವ ಹುದ್ದೆಯ ವಿವರ ಈ ಕೆಳಕಂಡಂತಿದೆ</li>
</ul>
<table>
<tr><th>ಕ.ಸಂ</th><th>ಹುದ್ದೆಗಳು</th><th>ಅನುಮೋದನೆಗೊಂಡಿರುವ ಹುದ್ದೆ</th><th>ಖಾಲಿ</th></tr>
<tr><td>1</td><td>ಪೌರಕಾರ್ಮಿಕರು</td><td>204</td><td>9</td></tr>
<tr><td>2</td><td>ವಾಹನ ಚಾಲಕರು</td><td>38</td><td>8</td></tr>
</table>
</td></tr>
</table>

| | | | |
|---|---|---|---|
| 3 | ಸೆಕ್ಯೂರಿಟಿ ಮತ್ತು ಸೂಪರ್ ವೈಜರ್ | 11 | 11 |

| | | |
|---|---|---|
| ಇ | ಈ ಖಾಲಿಯಿರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು: | • ವಯೋನಿವೃತ್ತಿ ಮತ್ತು ನಿಧನದಿಂದ ತೆರವಾಗಿರುವ 5 ಜನ ಪೌರಕಾರ್ಮಿಕರ ಹುದ್ದೆಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಹಂತದಲ್ಲಿ ಭರ್ತಿಮಾಡಲು ಕ್ರಮವಹಿಸಲಾಗುತ್ತಿದೆ.<br>• 8 ವಾಹನ ಚಾಲಕರು ಹಾಗು 11 ಜನ ಸೆಕ್ಯೂರಿಟಿ ಮತ್ತು ಸೂಪರ್ ವೈಜರ್‌ಗಳನ್ನು ಹೊರಗುತ್ತಿಗೆ ಮೂಲಕ ಪಡೆಯುವ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಶೀಘ್ರವಾಗಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ. |
| ಈ | ಒಣ ತ್ಯಾಜ್ಯ ಮತ್ತು ದ್ರವ ತ್ಯಾಜ್ಯಗಳನ್ನು ವಿಂಗಡಿಸಿ ಮಂಡ್ಯ ನಗರದಲ್ಲಿ ವೈಜ್ಞಾನಿಕವಾಗಿ ಮತ್ತು ಸಮರ್ಪಕವಾಗಿ ತ್ಯಾಜ್ಯ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | • ಘನತ್ಯಾಜ್ಯ ನಿರ್ವಹಣೆ ನಿಯಮಗಳು 2016 ರ ರೀತ್ಯಾ ಹಸಿ ಹಾಗು ಒಣ ತ್ಯಾಜ್ಯವನ್ನು ಮೂಲದಲ್ಲಿಯೇ ಬೇರ್ಪಡಿಸಿ ಪ್ರತ್ಯೇಕವಾಗಿ 18 ವಾರ್ಡ್‌ಗಳಿಂದ ಸಂಗ್ರಹಿಸಲು ಕ್ರಮವಹಿಸಿದೆ.<br>• ನಗರಸಭೆಯು ಸಂಗ್ರಹಿಸುವ ಒಣ ತ್ಯಾಜ್ಯ ವಸ್ತುಗಳನ್ನು ಪುನ: ಮರುಬಳಕೆಯಾಗುವ, ಮರುಬಳಕೆಯಾಗದ ಹಾಗು ದಹನಯೋಗ್ಯ ತ್ಯಾಜ್ಯಗಳಾಗಿ ವಿಂಗಡಿಸಲಾಗುತ್ತಿದೆ.<br>• ಮರುಬಳಕೆಯಾಗುವ ತ್ಯಾಜ್ಯವನ್ನು ಅಧಿಕೃತ ಮರುಬಳಕೆ ಕೇಂದ್ರಕ್ಕೆ (Authorised recyclers) ಸಾಗಣೆ ಮಾಡಲು ನಗರಸಭೆಗೆ ಸೂಚನೆ ನೀಡಿದೆ.<br>• ಮರುಬಳಕೆಯಾಗದ ಮತ್ತು ದಹನಯೋಗ್ಯ ತ್ಯಾಜ್ಯವನ್ನು ಪ್ರತ್ಯೇಕಿಸಿ ಹತ್ತಿರದ ಕಾರ್ಖಾನೆಗಳಿಗೆ ಪರ್ಯಾಯ ಇಂಧನವಾಗಿ ಬಳಸುವಂತೆ ಕ್ರಮವಹಿಸುವುದು ಹಾಗು ನಿಸತ್ವ ತ್ಯಾಜ್ಯವನ್ನು ಮಾತ್ರ ವೈಜ್ಞಾನಿಕ ನೆಲಭರ್ತಿ ಮಾಡಲು ಸೂಚನೆಗಳನ್ನು ನೀಡಲಾಗಿದೆ.<br>ದ್ರವ ತ್ಯಾಜ್ಯಗಳ ವೈಜ್ಞಾನಿಕ ವಿಲೇವಾರಿಗಾಗಿ ಮಂಡ್ಯ ನಗರಸಭೆಯು ಈ ಕೆಳಕಂಡಂತೆ ಕ್ರಮವಹಿಸಿದೆ<br>• ಮಂಡ್ಯ ನಗರಸಭಾ ವ್ಯಾಪ್ತಿಯಲ್ಲಿ ಸುಮಾರು 225 ಕಿ.ಮೀಗಳ ಒಳಚರಂಡಿ ಕೊಳವೆಗಳನ್ನು ಅಳವಡಿಸಲಾಗಿದೆ. (ನಗರದ ಶೇ.93 ಭಾಗದಲ್ಲಿ ಅಳವಡಿಸಲಾಗಿದೆ.) ಮಂಡ್ಯ ನಗರದಲ್ಲಿ ಒಳಚರಂಡಿ Missing Link ಹಾಗೂ Sewage |

Generated from eOffice by DR.NARAYANAGOWDA, MUNICIPAL ADM MINISTER, Urban Development Department on 21/09/20 12:11 PM

| | | |
|---|---|---|
| | | Treatment Plant ಗಳನ್ನು ಉನ್ನತೀಕರಿಸಲು ರೂ.6130.00 ಲಕ್ಷಗಳ ಅಂದಾಜು ಪಟ್ಟಿಯನ್ನು ಅನುಮೋದನೆಗಾಗಿ ಕರ್ನಾಟಕ ನಗರ ನೀರು ಸರಬರಾಜು ಒಳಚರಂಡಿ ನೀರು ಮಂಡಳಿ ವತಿಯಿಂದ ದಿನಾಂಕ: 01-03-2019 ರಂದು ಪ್ರಸ್ತಾವನೆಯನ್ನು ತಯಾರಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಿದ್ದು ಪರಿಶೀಲನೆಯ ಹಂತದಲ್ಲಿರುತ್ತದೆ.<br>• ಮಂಡ್ಯ ನಗರದಲ್ಲಿ ಉತ್ಪತ್ತಿಯಾಗುವ ಮಲಿನ ನೀರಿನ ಶುದ್ಧೀಕರಣಕ್ಕಾಗಿ ಮಂಡ್ಯ ನಗರದ ಚಿಕ್ಕಗೌಡನದೊಡ್ಡಿ ಪ್ರದೇಶದಲ್ಲಿ 9.62 ಎಂ.ಎಲ್.ಡಿ ಮತ್ತು ಗುತ್ತಲು ಪ್ರದೇಶದಲ್ಲಿ 8.90 ಎಂ.ಎಲ್.ಡಿ ಮಲಿನ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸಿದ್ದು ಶುದ್ಧೀಕರಣ ಕಾರ್ಯ ನಿರ್ವಹಿಸಲಾಗುತ್ತಿದೆ.<br>• ಮಂಡ್ಯ ನಗರದ 4 ಪ್ರದೇಶಗಳಲ್ಲಿ ತೇವ ಬಾವಿ (Wet Well) ನಿರ್ಮಿಸಲು ಕ್ರಮವಹಿಸಿ ಈಗಾಗಲೇ 3 ತೇವ ಬಾವಿಗಳನ್ನು (ಗುತ್ತಲು, ದೇವೇಗೌಡನದೊಡ್ಡಿ ಮತ್ತು ಚಿಕ್ಕಗೌಡನದೊಡ್ಡಿ) ಚಾಲನೆ ನೀಡಲಾಗಿದೆ ಮತ್ತು ಉಳಿದ ಇನ್ನೊಂದು ತೇವ ಬಾವಿ (ಮಾರುತಿನಗರ) ಶೀಘ್ರದಲ್ಲಿಯೇ ಚಾಲನೆಗೊಳಿಸಲು ಕ್ರಮವಹಿಸಲಾಗುತ್ತದೆ. |

ಸಂಖ್ಯೆ: ನಅಇ 263 ಸಿಎಸ್ಎಸ್ 2020

(ನಾರಾಯಣಗೌಡ)
ಮಾನ್ಯ ಪೌರಾಡಳಿತ ಹಾಗೂ
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.